> ನೀವೊಂದು ನಾಯಿ ಸಾಕ್ತೀರಿ ಅದು ಒಂದಿನ ನಿಮ್ ಹಾಸಿಗೇಲಿ ಕಕ್ಕ ಮಾಡತ್ತೆ ಅದ್ಕೆ ಒಳ್ಳೆ ಕೆಲಸ ಮಾಡ್ದೆ ಅಂತ ಎತ್ತಿ ಮುದ್ದಾಡ್ತೀರಾ ಅಥವಾ ಹೊಡೀತೀರಾ? ಕಕ್ಕ ಮಾಡಿದೆ ಅಂತ ಒಂದೇಟು ಹಾಕ್ದೆ ಅಂತ ಇವ್ನ ಪ್ರಾಣಿ ವಿರೋಧಿ... ಪ್ರಾಣಿ ಸಾಕೋಕೇ ಬರಲ್ಲ ಅಂತೆಲ್ಲ ಹೇಳೋಕಾಗತ್ತಾ?



ಬೆವರು ಒರೆಸಿದ. ನಾನೂ ಕಷ್ಟಪಟ್ಟು ಕರ್ಚಿಫ್ ತೆಗೆದು ಬೆವರು ಒರೆಸಿಕೊಂಡೆ) ಥಿಯೇಟರ್ ಮುಚ್ಕೋಗಿದ್ದಷ್ಟೇ ಬರೀತಿರಾ? ಅದೇ ಒಬ್ಬ ಪ್ರೊಡ್ಯೂಸರು ಮನೆ ಮಠ ಮಾರ್ಕೊಂಡು ಸಿನಿಮಾ ಮಾಡಿದ್ರೆ ಸಿನಿಮಾ ಡಬ್ಬಾ ಅಂಥ ಒಂದೇ ಲೈನ್ನಲ್ಲಿ ಬರ್ದು ಮುಗಿಸ್ತೀರಾ. ಅದು ರಿವ್ಯೂ ಅಂತೆ ಆ ನಿರ್ಮಾಪಕ ಎಷ್ಟ್ ಕಷ್ಟಪಟ್ಟಿದಾನೆ. ಅವ್ನಿಗೆ ಎಷ್ಟ್ ಸಾಲ ಇದೆ. ಎಷ್ಟ್ ಜನರು ಆ ಸಿನಿಮಾಗೆ ಕೆಲಸ ಮಾಡ್ತಿದಾರೆ ಅಂತ ಕಲ್ಪನೆ ಇದ್ಯಾ ನಿಮಗೆ? ಹಾಗಾದ್ರೆ ಜರ್ನಲಿಸ್ಟ್‌ಗಳೇ ಸೇರ್ಕೊಂಡು ಒಂದು ಸಿನಿಮಾ ಮಾಡಿ ಗೆಲ್ಲಿಸಿ ನೋಡೋಣ... ಈವತ್ ಚಾಲೆಂಜ್ ಮಾಡಿ ಹೇಳ್ತೀನಿ. ನೀವ್ ನೀವೇ ಸೇರ್ಕೊಂಡು ಒಂದ್ ಸಿನಿಮಾ ಮಾಡಿ. ಬೇಕಾದ್ರೆ ನಾನೇ ಕಾಲ್ ಶೀಟ್ ಕೊಡ್ತೀನಿ. ಸಿನಿಮಾ ಗೆಲ್ಸಿ ನೋಡೋಣ. ಬರೀ ಬರೆಯೋದು ಮಾತ್ರ ಅಲ್ಲ... ಫೀಲ್ಡ್ ಎಕ್ಸ್‌ಪೀರಿಯನ್ಸೂ ಇರ್ಬೇಕಲ್ವಾ?

◆ **ನಿಜ ಸರ್ ಆದ್ರೆ ನಿರ್ಮಾಪಕನ ಕಷ್ಟಕ್ಕೆ ಮುಖ್ಯ ಕಾರಣ ನೀವು ತಗೊಳ್ಳೋ ವಿಪರೀತ ಸಂಭಾವನೆ ಅಂತಾನೂ ಮಾತು ಇದ್ಯಲ್ಲ...**

ಹೌದಾ? ಆಯ್ತು ಬಿಡಿ, ಹಿಂದ್ಗಡೆ ಹೇಳ್ಕೊಳ್ಳೋರಿಗೆ ನಾನ್ಯಾವತ್ತೂ ತಲೆ ಕೆಡಿಸ್ಕೊಳ್ಳೋನೇ ಅಲ್ಲ. ಗಂಡ್ಸು ಮುಂದ್ಗಡೆ ನಿಂತು ಮಾತಾಡ್ತಾನೆ. ಇಷ್ಟ್ ವರ್ಷ ಸಿನಿಮಾ ಮಾಡಿದೀನಿ ಒಬ್ನೇ ಒಬ್ಬ ಪ್ರೊಡ್ಯೂಸರ್ ಬಂದು ನಾನ್ ದರ್ಶನ್ ಸಂಭಾವನೆ ಕೊಟ್ಟು ಲಾಸ್ ಮಾಡ್ಕೊಂಡಿದೀನಿ ಅಂತ ಹೇಳ್ಬಿಡಿ ನೋಡೋಣ. ನನ್ನಿಂದ ಲಾಸ್ ಆಗಿದೆ ಅಂತೀರಲ್ಲಾ, ಹೇಳ್ಸಿ ನೋಡೋಣ. ಸಿನಿಮಾ ಓಡ್ಲೇ ಇಲ್ಲ, ಲಾಸಾಗೋಯ್ತು ಅಂತ ಅರ್ಧಮರ್ಧ ಪೇಮೆಂಟ್ ಮಾಡ್ಕೊಂಡು ಮುಖ ತಪ್ಪಿಸ್ಕೊಂಡು ಓಡಾಡ್ತಿರೋರು ಎಲ್ಲೆಲ್ಲಿ ಎಷ್ಟೆಷ್ಟ್ ಆಸ್ತಿ ಮಾಡ್ಕೊಂಡಿದಾರೆ, ಅಂತೆಲ್ಲ ನಂಗೊತ್ತು. ನೀವ್ ಹೇಳೋದೇ ಕರೆಕ್ಟ್ ಅಂತ ಇಟ್ಕೊಳೋಣ. ನಾನು ಜಾಸ್ತಿ ಹಣ ತಗೋತೀನಿ ಮತ್ಯಾಕ್ ನನ್ನತ್ರಾನೇ ಸಿ ನಿ ಮಾ